ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ತಹಶೀಲ್ದಾರರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/08/2015-16. ದಿನಾಂಕ: 13-07-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಸಿದ್ದವ್ವ ಗಂಡ ಲೇಟ್ ಹನುಮಪ್ಪ<br>2)ಅಂಜೀನಪ್ಪ ತಂದೆ ಲೇಟ್ ಹನುಮಪ್ಪ<br>ಬಡೇಲಡುಕು ಗ್ರಾಮ<br>ಕೂಡ್ಲಿಗಿ ತಾಲೂಕು</td><td>ಕಂದಾಯ ಪರಿವೀಕ್ಷಕರು<br>ಕೂಡ್ಲಿಗಿ</td></tr>
<tr><td colspan="2">ಕೂಡ್ಲಿಗಿ ತಾಲೂಕು ಬಡೇಲಡುಕು ಗ್ರಾಮದ ಸನಂ 28ಇ. ವಿಸ್ತೀರ್ಣ 1-40. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಬಡೇಲಡುಕು ಗ್ರಾಮದ ಸನಂ 28ಇ. ವಿಸ್ತೀರ್ಣ 1-40. ಎಕ್ರೆ ಜಮೀನನ್ನು ಸದರಿ ಗ್ರಾಮದ ಸಿದ್ದವ್ವ ಗಂಡ ಲೇಟ್ ಹನುಮಪ್ಪ. ಅಂಜೀನಪ್ಪ ತಂದೆ ಲೇಟ್ ಹನುಮಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಬಡೇಲಡುಕು ಇವರು ನಮೂನೆ-21 ರ ನೋಟಿಸನ್ನು ದಿನಾಂಕ 26-12-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಂಶವೃಕ್ಷ ವ್ಯತ್ಯಾಸವಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 53/2014-15. ದಿನಾಂಕ 27-01-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 24-06-2015 ರಿಂದ 13-07-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಬಡೇಲಡುಕು ಗ್ರಾಮದ ಸನಂ 28ಇ. ವಿಸ್ತೀರ್ಣ 1-40. ಎಕ್ರೆ ಜಮೀನು ನಮ್ಮ ಮಾವನವರಾದ ಕಾಡಪ್ಪ. ಮತ್ತು ಇವರ ತಮ್ಮನಾದ ಕಾಳಪ್ಪ. ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಸದರಿ ಕಾಡಪ್ಪ ಇವರು ದಿನಾಂಕ 25-10-1960 ರಂದು ಹಾಗೂ ಇವರ ತಮ್ಮನಾದ ಕಾಳಪ್ಪ ಇವರು ದಿನಾಂಕ 01-04-1975 ರಂದು ನಿಧನ ಹೊಂದಿರುತ್ತಾರೆ. ಇವರು ಅವಿವಾಹಿತರಾಗಿರುತ್ತಾರೆ. ಮತ್ತು ನನ್ನ ಗಂಡನಾದ ಹನುಮಪ್ಪ ಇವರು ದಿನಾಂಕ 18-07-2009 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಸಲ್ಲಿಸಲು ವಿಫಲರಾದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಬಡೇಲಡುಕು ಗ್ರಾಮದ ಸನಂ 28ಇ. ವಿಸ್ತೀರ್ಣ 1-40. ಎಕ್ರೆ ಜಮೀನಿನ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಸಲ್ಲಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 13-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಸಿಲ್ದಾರರು,ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಿದ್ದವ್ವ ಗಂಡ ಲೇಟ್ ಹನುಮಪ್ಪ. ಅಂಜೀನಪ್ಪ ತಂದೆ ಲೇಟ್ ಹನುಮಪ್ಪ. ಬಡೇಲಡುಕು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೂಡ್ಲಿಗಿ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಚೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

**ದೃಢೀಕೃತ ನಕಲು**

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.